**ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಇವರ ನಡವಳಿಗಳು**

**ವಿಷಯ:-** ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ 10 ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳ ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ 2024-25 ನೇ ಸಾಲಿನಲ್ಲಿ ಮಾರ್ಚ್-2024ರ ಮಾಹೆಯ ಸರ್ಕಾರದ ಪಾಲಿನ ಶೇ 85% ಸಹಾಯಾನುದಾನ (ವೇತನ) ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:-**
1. ಸರ್ಕಾರದ ಆದೇಶ ಸಂಖ್ಯೆ: ಇಡಿ 36 ಹೆಚ್‌ಪಿಟಿ 2024, ದಿನಾಂಕ:04.04.2024.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಖಜಾನೆ-2), ಆರ್ಥಿಕ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಖ2 /ಪಿ.ಎಂ.ಯು /92 /2015-16 (7), ದಿನಾಂಕ: 24-10-2019.

**ಪ್ರಸ್ತಾವನೆ:**

ಮೇಲೆ ನಮೂದಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರ ಸರ್ಕಾರದ ಆದೇಶದಲ್ಲಿ ಸರ್ಕಾರವು ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿರುವ ಖಾಸಗಿ ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು ಸಿಬ್ಬಂದಿಗಳಿಗೆ ಸರ್ಕಾರದಿಂದ ಬಿಡುಗಡೆ ಮಾಡುವ ಶೇ.85ರಷ್ಟು ಸಹಾಯಾನುದಾನವನ್ನು ಪ್ರತಿ ತಿಂಗಳು ರಾಷ್ಟ್ರೀಕೃತ ಬ್ಯಾಂಕ್‌ಗೆ ಜಮೆ ಮಾಡುವ ಮೂಲಕ ಸಿಬ್ಬಂದಿ ವರ್ಗದವರುಗಳಿಗೆ (ಬೋಧಕ ಮತ್ತು ಬೋಧಕೇತರ) ವಿತರಿಸಲು ಸರ್ಕಾರವು ಅನುಮತಿಸಿರುತ್ತದೆ ಹಾಗೂ ಈ ಸಂಬಂಧ ಮುಂದಿನ ಅಗತ್ಯ ಕ್ರಮವನ್ನು ತಾಂತ್ರಿಕ ಶಿಕ್ಷಣ ನಿರ್ದೇಶಕರು ಕೈಗೊಳ್ಳಲು ಆದೇಶಿಸಿರುತ್ತದೆ.

ಉಲ್ಲೇಖ (2) ರ ಸರ್ಕಾರದ ಸುತ್ತೋಲೆ ಪತ್ರದಲ್ಲಿ ಸರ್ಕಾರದಿಂದ ವೇತನ ಸಹಾಯಾನುದಾನ ಪಡೆಯುತ್ತಿರುವ ಎಲ್ಲಾ ನಿಗಮ/ಮಂಡಳಿ/ನಿಯಮಿತ/ವಿಶ್ವವಿದ್ಯಾಲಯಗಳು ಮತ್ತು ಇನ್ನಿತರ ಸ್ವಾಯತ್ತ ಸಂಸ್ಥೆಗಳು ಮಾರ್ಚ್ 2022 ರೊಳಗಾಗಿ ಕಡ್ಡಾಯವಾಗಿ ಹೆಚ್.ಆರ್.ಎಂ.ಎಸ್. ನಲ್ಲಿ ಸಿಬ್ಬಂದಿ ವಿವರಗಳನ್ನು ದಾಖಲಿಸುವಂತೆ ತಿಳಿಸಲಾಗಿದೆ.

ಕೇಂದ್ರ ಕಛೇರಿಯ ಹೆಚ್.ಆರ್.ಎಂ.ಎಸ್. ವಿಭಾಗದವರು ಈ ಕಡತ ಸಂ: DTE-ADMI/5/2024-JD-DEPT TECH EDUCATION (E:1318670) ರಲ್ಲಿ 10 ಅನುದಾನಿತ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ 861 ಬೋಧಕ/ಬೋಧಕೇತರ ಸಿಬ್ಬಂದಿಗಳ ಮಾರ್ಚ್-2024ರ ಮಾಹೆಯ ಸಹಾಯಾನುದಾನ (ವೇತನ) 10,63,55,175/-ಗಳನ್ನು ಖಜಾನೆ-2 ತಂತ್ರಾಂಶದ ನಮೂನೆಯನ್ನು ಸಲ್ಲಿಸಿರುತ್ತಾರೆ (ಸದರಿ ಬಿಲ್ಲನ್ನು ಸಂಸ್ಥೆಯ ಪ್ರಾಚಾರ್ಯರು ದೃಢೀಕರಿಸಿರುತ್ತಾರೆ). ಆದುದರಿಂದ 10 ಅನುದಾನಿತ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ 861 ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಮಾರ್ಚ್-2024ರ ಮಾಹೆಯ ಸಹಾಯಾನುದಾನ (ವೇತನ) ಬಿಡುಗಡೆ ಮಾಡಬಹುದಾಗಿದೆ.

2024-25 ನೇ ಸಾಲಿಗೆ ಸರ್ಕಾರವು ಒದಗಿಸಿರುವ ಅನುದಾನದಲ್ಲಿ 10 ಅನುದಾನಿತ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು 861 ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ ಮಾರ್ಚ್-2024ರ ಮಾಹೆಯ ಸರ್ಕಾರದ ಸಹಾಯಾನುದಾನ (ವೇತನ) ರೂ. 10,63,55,175/- (ರೂಪಾಯಿ ಹತ್ತು ಕೋಟಿ ಅರವತ್ತ ಮೂರು ಲಕ್ಷದ ಐವತ್ತೈದು ಸಾವಿರದ ಒಂದು ನೂರು ಎಪ್ಪತ್ತೈದು ಮಾತ್ರ)ಗಳನ್ನು 2024-25 ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 2203-00-112-0-07-101 ರಡಿ ಖಜಾನೆ-2 ತಂತ್ರಾಂಶದ ಮುಖಾಂತರ ಬಿಡುಗಡೆಗೊಳಿಸಲು ತೀರ್ಮಾನಿಸಲಾಗಿದೆ.

ಆದುದರಿಂದ, ಈ ಕೆಳಕಂಡ ಆದೇಶ,

**ಕಛೇರಿ ಆದೇಶ ಸಂ: ಡಿಟಿಇ 19 ಜಿಆರ್‌ಟಿ (2) 2024, ಬೆಂಗಳೂರು, ದಿನಾಂಕ: 09-05-2024.**

149

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ **10** ಅನುದಾನಿತ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು **861** ಬೋಧಕ/ಬೋಧಕೇತರ ಸಿಬ್ಬಂದಿಗಳಿಗೆ **ಮಾರ್ಚ್-2024ರ** ಮಾಹೆಗೆ ಸರ್ಕಾರದ ಪಾಲಿನ **ಶೇ.85** ರಷ್ಟು ಸಹಾಯಾನುದಾನ (ವೇತನ) **ರೂ. 10,63,55,175/- (ರೂಪಾಯಿ ಹತ್ತು ಕೋಟಿ ಅರವತ್ತ ಮೂರು ಲಕ್ಷದ ಐವತ್ತೈದು ಸಾವಿರದ ಒಂದು ನೂರು ಎಪ್ಪತ್ತೈದು ಮಾತ್ರ)**ಗಳನ್ನು ಖಜಾನೆ-2 ತಂತ್ರಾಂಶದ ಮೂಲಕ 2024-25 ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 2203-00-112-0-07-101 ರಡಿ ಬಿಡುಗಡೆ ಮಾಡಿ ಆದೇಶಿಸಿದ್ದು, ಸದರಿ ಖರ್ಚನ್ನು ಲೆಕ್ಕ ಶೀರ್ಷಿಕೆ 2203-00-112-0-07-101 ರಡಿಯಲ್ಲಿ ಭರಿಸಲು ಕೂಡ ಆದೇಶಿಸಲಾಗಿದೆ.

| Sl. No. | GIA Engineering Colleges | EST | GROSS | Deductions | Net | No. of Employees | HRMS Bill No. |
|---|---|---|---|---|---|---|---|
| 1 | B V Bhommareddi College of Engg and Technology Hubli | 2 | 7740864 | 2415976 | 5324888 | 45 | HG2404977629 |
| 2 | P E S College of Engg Mandya | 3 | 10292533 | 2849035 | 7443498 | 119 | HG2404977630 |
| 3 | Malnad college of Engineering Hassan | 4 | 10922973 | 3478031 | 7444942 | 87 | HG2404977631 |
| 4 | PDA college of Engg Kalburgi | 5 | 12201435 | 4616057 | 7585378 | 91 | HG2404977633 |
| 5 | SJCE , Mysore | 6 | 12218404 | 2924992 | 9293412 | 108 | HG2404977634 |
| 6 | Dr Ambedkar Institute of Technology Bengaluru | 7 | 21533267 | 5834265 | 15699002 | 165 | HG2404977635 |
| 7 | Basaveshwara Engineering College | 8 | 9121165 | 2740597 | 6380568 | 78 | HG2404977640 |
| 8 | BMS College of Engg Bengaluru | 9 | 13522621 | 3327358 | 10195263 | 96 | HG2404977641 |
| 9 | BMS Evening College of Engg Bengaluru | 10 | 1403742 | 274016 | 1129726 | 10 | HG2404977644 |
| 10 | The National Institute of Engg Mysuru | 11 | 7398171 | 2369783 | 5028388 | 62 | HG2404977647 |
| | **TOTAL** | | **106355175** | **30830110** | **75525065** | **861** | |

ಈಗ ಬಿಡುಗಡೆ ಮಾಡಿರುವ ಮಾರ್ಚ್-2024ರ ಮಾಹೆಯ ಸರ್ಕಾರದ ಪಾಲಿನ ಸಹಾಯಾನುದಾನ (ವೇತನ) ಒಟ್ಟು ರೂ. 10,63,55,175/- (ರೂಪಾಯಿ ಹತ್ತು ಕೋಟಿ ಅರವತ್ತ ಮೂರು ಲಕ್ಷದ ಐವತ್ತೈದು ಸಾವಿರದ ಒಂದು ನೂರು ಎಪ್ಪತ್ತೈದು) ಮಾತ್ರಗಳನ್ನು ಖಜಾನೆ-2 ರಲ್ಲಿ ವೆಚ್ಚ ಭರಿಸಲು ಆದೇಶಿಸಲಾಗಿದೆ.

**ಷರತ್ತು ಮತ್ತು ನಿಬಂಧನೆಗಳು:-**

1. ಇಂಜಿನಿಯರಿಂಗ್ ಕಾಲೇಜುಗಳಿಗೆ ಸಂಬಂಧಪಟ್ಟಂತೆ ಸಹಾಯಾನುದಾನವನ್ನು ಸರ್ಕಾರದ ಪಾಲಿನ ಶೇ.85ರಷ್ಟು ವೇತನವನ್ನು ಪರಿಗಣಿಸಲಾಗಿದೆ. ಈ ಸಹಾಯಾನುದಾನ ಬಿಡುಗಡೆಯು ಇಲಾಖೆಯ ಲೆಕ್ಕ ತಪಾಸಣೆಗೆ ಒಳಪಟ್ಟಿರುತ್ತದೆ.
2. ಆಡಳಿತ ಮಂಡಳಿಯ ಪಾಲಿನ ಶೇ.15ರ ಮೊತ್ತವನ್ನು ಸಿಬ್ಬಂದಿಗಳ ಖಾತೆಗಳಿಗೆ ಪಾವತಿಸತಕ್ಕದ್ದು.
3. ಯಾವೊಬ್ಬ ನೌಕರನಿಗೆ ಹೆಚ್ಚಿನ ಅನುದಾನ ಪಾವತಿಯಾಗಿದ್ದು ಕಂಡು ಬಂದಲ್ಲಿ, ಅಂತಹ ನೌಕರನಿಂದ ನೀಡಲಾಗಿರುವ ಹೆಚ್ಚುವರಿ ಮೊತ್ತವನ್ನು ನೇರವಾಗಿ ವಸೂಲಿ ಮಾಡಲಾಗುವುದು.
4. 2023-24ನೇ ಸಾಲಿನಲ್ಲಿ ಇಲಾಖೆಯಿಂದ ಬಿಡುಗಡೆಯಾಗಿರುವ ಅನುದಾನದ ಬಗ್ಗೆ 'ಬಳಕೆ ಪ್ರಮಾಣ ಪತ್ರ' ಹಾಗೂ 'ಸಿಏ' ದೃಢೀಕೃತ ಲೆಕ್ಕ ಪರಿಶೋಧನಾ ವರದಿಯನ್ನು ಕ.ಆ.ಸಂಹಿತೆ ಅನುಚ್ಛೇದ 161ರ ಅನ್ವಯ ಇಲಾಖೆಗೆ ಸಲ್ಲಿಸತಕ್ಕದ್ದು.
5. ಪ್ರತಿ ತಿಂಗಳು ಶಾಸನ ಬದ್ಧ ಕಟಾವುಗಳನ್ನು ಮಾಡಿ ಆಯಾ/ಸಂಬಂಧಪಟ್ಟ ಇಲಾಖೆಗಳಿಗೆ ತಪ್ಪದೆ ಕಡ್ಡಾಯವಾಗಿ ಕಳುಹಿಸಿ ಈ ಕಛೇರಿಗೆ ಮಾಹಿತಿ ಸಲ್ಲಿಸತಕ್ಕದ್ದು.
6. ಈಗ ಬಿಡುಗಡೆ ಮಾಡಿರುವ ಅನುದಾನ ಮೊತ್ತದ ಖರ್ಚನ್ನು 2023-24ನೇ ಸಾಲಿನ ಕೆಳಕಂಡ ಲೆಕ್ಕ ಶೀರ್ಷಿಕೆಯಲ್ಲಿ ಭರಿಸತಕ್ಕದ್ದು. 2203-ತಾಂತ್ರಿಕ ಶಿಕ್ಷಣ-00-112-ಸರ್ಕಾರೇತರ ತಾಂತ್ರಿಕ ಕಾಲೇಜುಗಳು, ಹಾಗೂ ಸಂಸ್ಥೆಗಳಿಗೆ ಸಹಾಯಾನುದಾನ-0-07-ಸರ್ಕಾರೇತರ ತಾಂತ್ರಿಕ ಶಾಲೆಗಳು-01-ಸಹಾಯಾನುದಾನ (2203-00-112-0-07-101).

**"ಕರಡು ಮಾನ್ಯ ಆಯುಕ್ತರಿಂದ ಅನುಮೋದಿಸಿದೆ"**

**ನಿರ್ದೇಶಕರು**
**ತಾಂತ್ರಿಕ ಶಿಕ್ಷಣ ಇಲಾಖೆ**

**ಇವರಿಗೆ:**

1. ಆಯುಕ್ತಾಲಯದ ಬಿಎಲ್‌ಎಸ್ (3) ವಿಭಾಗಕ್ಕೆ ಮುಂದಿನ ಕ್ರಮಕ್ಕಾಗಿ.
2. ಪಟ್ಟಿಯಲ್ಲಿ ಸೂಚಿಸಿರುವ ಅನುದಾನಿತ ಇಂಜಿನಿಯರಿಂಗ್ ಕಾಲೇಜು ಪ್ರಿನ್ಸಿಪಾಲರುಗಳಿಗೆ.

**ಪ್ರತಿ:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸ್ಪೆಷಲ್ ಸೆಲ್, ಮಹಾಲೇಖಪಾಲರ ಕಛೇರಿ, ಬೆಂಗಳೂರು
3. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4. ತಾಂತ್ರಿಕ ಶಿಕ್ಷಣ ಕೇಂದ್ರ ಕಛೇರಿ (ಅ) ಲೆಕ್ಕಾಧಿಕಾರಿಗಳು [ಬಿಲ್ಸ್] (ಆ) ನಗದು ಶಾಖೆ (ಇ) ತಾಂತ್ರಿಕ ಶಿಕ್ಷಣ ಕೇಂದ್ರ ಕಛೇರಿ ಇ-ಗವರ್ನೆನ್ಸ್ ವಿಭಾಗ- ಮಾಹಿತಿಗಾಗಿ ಹಾಗೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು.